Akashvani: Bangalore
National Bulletins In Kannada
12.07.2025 : 7.35AM
**ಆಕಾಶವಾಣಿ, ಬೆಂಗಳೂರು**
**ರಾಷ್ಟ್ರೀಯ ವಾರ್ತೆಗಳು**
12.07.2025 : 7.35AM
*********

**ಮುಖ್ಯಾಂಶಗಳು :**

1. ಉದ್ಯೋಗ ಮೇಳ; ಹೊಸದಾಗಿ ನೇಮಕಗೊಂಡ ೫೧ ಸಾವಿರಕ್ಕೂ ಹೆಚ್ಚು ಅಭ್ಯರ್ಥಿಗಳಿಗೆ ಇಂದು ನೇಮಕಾತಿ ಪತ್ರ ವಿತರಿಸಲಿರುವ ಪ್ರಧಾನಿ
2. ಅಹಮದಾಬಾದ್ ಏರ್ ಇಂಡಿಯಾ ವಿಮಾನ ಅಪಘಾತ ಪ್ರಕರಣ; ಪ್ರಾಥಮಿಕ ವರದಿ ಬಿಡುಗಡೆಗೊಳಿಸಿದ ವಿಮಾನ ಅಪಘಾತ ತನಿಖಾ ದಳ
3. ಡಿಆರ್‌ಡಿಒ, ಭಾರತೀಯ ವಾಯು ಪಡೆಯಿಂದ ದೇಶೀಯ 'ಅಸ್ತ್ರ' ಕ್ಷಿಪಣಿ ಹಾರಾಟ ಪರೀಕ್ಷೆ ಯಶಸ್ವಿ
4. ವಿಂಬಲ್ಡನ್ ಟೆನಿಸ್; ಮಹಿಳಾ ಸಿಂಗಲ್ಸ್ ಫೈನಲ್‌ನಲ್ಲಿಂದು ಇಗಾ ಸ್ವಿಯಾಟೆಕ್ - ಅಮಾಂಡಾ ಅನಿಸಿಮೋವಾ ಮುಖಾಮುಖಿ

**********

ದೇಶದಾದ್ಯಂತ ಇಂದು ೪೭ ಸ್ಥಳಗಳಲ್ಲಿ ೧೬ ನೇ ಉದ್ಯೋಗ ಮೇಳ ನಡೆಯಲಿದೆ. ಪ್ರಧಾನಿ ನರೇಂದ್ರ ಮೋದಿ ಅವರು ವಿವಿಧ ಸರ್ಕಾರಿ ಇಲಾಖೆಗಳು ಮತ್ತು ಸಂಸ್ಥೆಗಳಲ್ಲಿ ಹೊಸದಾಗಿ ನೇಮಕಗೊಂಡ ಯುವ ಉದ್ಯೋಗಿಗಳಿಗೆ ವಿಡಿಯೋ ಕಾನ್ಫರೆನ್ಸ್ ಮೂಲಕ ೫೧ ಸಾವಿರಕ್ಕೂ ಹೆಚ್ಚು ನೇಮಕಾತಿ ಪತ್ರಗಳನ್ನು ವಿತರಿಸಲಿದ್ದಾರೆ. ಈ ಸಂದರ್ಭದಲ್ಲಿ ಅವರು ನೇಮಕಗೊಂಡವರನ್ನು ಉದ್ದೇಶಿಸಿ ಮಾತನಾಡಲಿದ್ದಾರೆ.ದೇಶಾದ್ಯಂತ ಆಯ್ಕೆಯಾದ ಅಭ್ಯರ್ಥಿಗಳು ರೈಲ್ವೆ, ಗೃಹ ವ್ಯವಹಾರಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಕಾರ್ಮಿಕ ಮತ್ತು ಉದ್ಯೋಗ ಹಾಗೂ ಅಂಚೆ ಇಲಾಖೆ ಸೇರಿದಂತೆ ಇತರೆ ಇಲಾಖೆಗಳು ಮತ್ತು ಸಚಿವಾಲಯಗಳಿಗೆ ಸೇರಲಿದ್ದಾರೆ. ದೇಶಾದ್ಯಂತ ಉದ್ಯೋಗ ಮೇಳಗಳ ಮೂಲಕ ಇಲ್ಲಿಯವರೆಗೆ ಹತ್ತು ಲಕ್ಷಕ್ಕೂ ಹೆಚ್ಚು ನೇಮಕಾತಿ ಪತ್ರಗಳನ್ನು ನೀಡಲಾಗಿದೆ.

**********

ಕಳೆದ ತಿಂಗಳು ೧೨ ರಂದು ಅಹಮದಾಬಾದ್‌ನಲ್ಲಿ ೨೬೦ ಜೀವಗಳನ್ನು ಬಲಿ ಪಡೆದ ಏರ್ ಇಂಡಿಯಾ ವಿಮಾನ ಅಪಘಾತದ ತನಿಖೆಯ ೧೫ ಪುಟಗಳ ಪ್ರಾಥಮಿಕ ವರದಿಯನ್ನು ವಿಮಾನ ಅಪಘಾತ ತನಿಖಾ ದಳ ನಿನ್ನೆ ರಾತ್ರಿ ಬಿಡುಗಡೆ ಮಾಡಿದೆ.ಬೋಯಿಂಗ್ ೭೮೭-೮ ಎಂಜಿನ್ ಒಳಗೊಂಡ ಏರ್ ಇಂಡಿಯಾ ೧೭೧ ವಿಮಾನ ಅಪಘಾತಕ್ಕೆ ಕಾರಣವಾದ ಘಟನೆಗಳ ಅನುಕ್ರಮ ಮತ್ತು ಎಂಜಿನ್ ಪರಿಸ್ಥಿತಿಯನ್ನು ವರದಿಯು ಪರಿಶೀಲಿಸಿದೆ.ವಿಮಾನದ ಎಂಜಿನ್ ಇಂಧನ ನಿಯಂತ್ರಣವು 'ರನ್' ನಿಂದ 'ಕಟ್‌ಆಫ್' ಸ್ಥಾನಕ್ಕೆ ಪರಿವರ್ತನೆಗೊಂಡು ಸ್ವಿಚ್ ಆಫ್ ಆಯಿತು. ಇದರ ಪರಿಣಾಮವಾಗಿ ವಾಯು ದುರಂತ ಸಂಭವಿಸಿತು ಎಂದು ವಿಮಾನ ಅಪಘಾತ ತನಿಖಾ ದಳ ಹೇಳಿದೆ.ಆರಂಭಿಕ ತನಿಖಾ ವರದಿಯ ಪ್ರಕಾರ, ಕಾಕ್‌ಪಿಟ್ ಧ್ವನಿ ರೆಕಾರ್ಡರ್‌ನಲ್ಲಿ ಪೈಲಟ್‌ಗಳಲ್ಲಿ ಒಬ್ಬರು, ಇಂಧನವನ್ನು ಏಕೆ ಕಡಿತಗೊಳಿಸಿದ್ದೀರಿ ಎಂದು ಇನ್ನೊಬ್ಬರನ್ನು

ಕೇಳುತ್ತಿರುವುದು ಕೇಳಬಹುದು. ಅದಕ್ಕೆ ಇನ್ನೊಬ್ಬ ಪೈಲಟ್, ತಾನು ಹಾಗೆ ಮಾಡಲಿಲ್ಲ ಎಂದು ಹೇಳುವ ಮೂಲಕ ಪ್ರತಿಕ್ರಿಯಿಸಿದರು. ಇಂಧನ ನಿಯಂತ್ರಣ ಸ್ವಿಚ್‌ಗಳನ್ನು ನಂತರ ಆನ್ ಮಾಡಲಾಯಿತು. ಆದರೆ ಒಂದು ಎಂಜಿನ್‌ನಲ್ಲಿನ ವೇಗವರ್ಧನೆಯನ್ನು ನಿಲ್ಲಿಸಲು ಸಾಧ್ಯವಾಗಲಿಲ್ಲ. ವಿಮಾನಕ್ಕೆ ಇಂಧನ ತುಂಬಲು ಬಳಸುವ ಬೌಸರ್‌ಗಳು ಮತ್ತು ಟ್ಯಾಂಕ್‌ಗಳಿಂದ ತೆಗೆದ ಇಂಧನ ಮಾದರಿಗಳನ್ನು ನಾಗರಿಕ ವಿಮಾನಯಾನ ನಿರ್ದೇಶನಾಲಯ ಪ್ರಯೋಗಾಲಯದಲ್ಲಿ ಪರೀಕ್ಷಿಸಲಾಯಿತು ಮತ್ತು ಅವು ತೃಪ್ತಿಕರವೆಂದು ಕಂಡುಬಂದಿವೆ ಎಂದು ವಿಮಾನ ಅಪಘಾತ ತನಿಖಾ ದಳ ಹೇಳಿದೆ.ಬೋಯಿಂಗ್ ೭೮೭-೮ ಡ್ರೀಮ್‌ಲೈನರ್ ಗುಜರಾತ್‌ನ ಅಹಮದಾಬಾದ್‌ನಲ್ಲಿರುವ ವಿಮಾನ ನಿಲ್ದಾಣದ ಹೊರವಲಯದಲ್ಲಿರುವ ಬಿಜೆ ವೈದ್ಯಕೀಯ ಕಾಲೇಜಿನ ಹಾಸ್ಟೆಲ್ ಕಟ್ಟಡಕ್ಕೆ ಅಪ್ಪಳಿಸಿತು. ವಿಮಾನದಲ್ಲಿದ್ದ ೨೪೨ ಜನರಲ್ಲಿ ೨೪೧ ಜನರು ಅಸುನೀಗಿದರು. ಒಬ್ಬ ಪ್ರಯಾಣಿಕ ಮಾತ್ರ ಬದುಕುಳಿದರು. ಆದರೆ ಹಾಸ್ಟೆಲ್‌ನಲ್ಲಿದ್ದ ೧೯ ಜನರು ಸಹ ಪ್ರಾಣ ಕಳೆದುಕೊಂಡರು. ವಿಮಾನವು ಅಹಮದಾಬಾದ್‌ನಿಂದ ಲಂಡನ್‌ನ ಗ್ಯಾಟ್ವಿಕ್‌ಗೆ ತೆರಳುತ್ತಿತ್ತು.

**********

'ಆಪರೇಷನ್ ಸಿಂದೂರ್' ಭಾಗವಾಗಿ ಭಾರತವು ಪಾಕಿಸ್ತಾನದೊಳಗಿನ ಒಂಬತ್ತು ಭಯೋತ್ಪಾದಕ ಗುರಿಗಳ ಮೇಲೆ ದಾಳಿ ಮಾಡಿತು. ಗಡಿಯ ಸಮೀಪದಲ್ಲಿ ಅಲ್ಲ, ಬದಲಾಗಿ ಅದರ ಭೂಪ್ರದೇಶದಾದ್ಯಂತ ಭಾರತೀಯ ಸಶಸ್ತ್ರ ಪಡೆಗಳಿಂದ ನಿಖರ ದಾಳಿ ನಡೆಸಲಾಯಿತು. ಗುರಿಗಳನ್ನು ಹೊರತುಪಡಿಸಿ ಬೇರೆಲ್ಲಿಯೂ ಕ್ಷಿಪಣಿ ದಾಳಿ ನಡೆಸಿಲ್ಲ ಎಂದು ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್ ಹೇಳಿದ್ದಾರೆ.ಚೆನ್ನೈನಲ್ಲಿ ನಡೆದ ಐಐಟಿ ಮದ್ರಾಸ್‌ನ ೬೨ ನೇ ವಾರ್ಷಿಕ ಘಟಿಕೋತ್ಸವ ಉದ್ದೇಶಿಸಿ ಮಾತನಾಡಿದ ಅವರು, ಆಪರೇಷನ್ ಸಿಂದೂರ್ ಬಗ್ಗೆ ವಿದೇಶಿ ಮಾಧ್ಯಮಗಳು ತಪ್ಪು ಮಾಹಿತಿಯನ್ನು ಹರಡುತ್ತಿವೆ. ಭಾರತದ ಮೇಲೆ ದಾಳಿ ನಡೆದು, ಹಾನಿಯಾದ ಒಂದೇ ಒಂದು ಚಿತ್ರವನ್ನು ವಿದೇಶಿ ಮಾಧ್ಯಮಗಳು ಪ್ರಸ್ತುತಪಡಿಸಲಿ ಎಂದು ಸವಾಲು ಹಾಕಿದರು.

**ಧ್ವನಿ: ಅಜಿತ್ ದೋವಲ್ (೨೨ ಸೆಕೆಂಡ್)**

ಪಾಕಿಸ್ತಾನ ಮತ್ತು ಪಾಕಿಸ್ತಾನ ಆಕ್ರಮಿತ ಕಾಶ್ಮೀರದ ಎಲ್‌ಇಟಿ ಮತ್ತು ಹಿಜ್ಬುಲ್ ಮುಜಾಹಿದ್ದೀನ್ ನೆಲೆಗಳು ಸೇರಿದಂತೆ ಭಯೋತ್ಪಾದಕ ಶಿಬಿರಗಳನ್ನು ೨೩ ನಿಮಿಷಗಳಲ್ಲಿ ನಾಶಪಡಿಸಿದ್ದಕ್ಕಾಗಿ ಭಾರತೀಯ ಸಶಸ್ತ್ರ ಪಡೆಗಳನ್ನು ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್ ಶ್ಲಾಘಿಸಿದ್ದು, ರಾಷ್ಟ್ರೀಯ ಭದ್ರತೆಯ ವಿಷಯಗಳ ಬಗ್ಗೆ ಜವಾಬ್ದಾರಿಯುತ, ಪುರಾವೆ ಆಧಾರಿತ ವರದಿಗಾಗಿ ವಿದೇಶಿ ಮಾಧ್ಯಮಗಳಿಗೆ ಕರೆ ನೀಡಿದರು.

**********

ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ ಹಾಗೂ ಭಾರತೀಯ ವಾಯುಪಡೆಯು ದೇಶೀಯ ಅಸ್ತ್ರ ಕ್ಷಿಪಣಿಯ ಹಾರಾಟ ಪರೀಕ್ಷೆಯನ್ನು ಯಶಸ್ವಿಯಾಗಿ ನಡೆಸಿವೆ. ಬಿಯಾಂಡ್ ವಿಷುಯಲ್ ರೇಂಜ್ ಏರ್-ಟು-ಏರ್ ಕ್ಷಿಪಣಿಯನ್ನು ಒಡಿಶಾದ ಸುಖೋಯ್-೩೦ ಒಞ-I ನಿಂದ ಹಾರಾಟ ಪರೀಕ್ಷೆ ನಡೆಸಲಾಯಿತು. ಕ್ಷಿಪಣಿಗಳು ನಿಖರತೆಯೊಂದಿಗೆ ಗುರಿಗಳನ್ನು ನಾಶಪಡಿಸಿದವು. ಈ ಯಶಸ್ವಿ ಹಾರಾಟ ಪರೀಕ್ಷೆಗಳು ದೇಶೀಯ ಅಸ್ತ್ರ ಶಸ್ತ್ರಾಸ್ತ್ರ ವ್ಯವಸ್ಥೆಗಳ ನಿಖರತೆ ಮತ್ತು ವಿಶ್ವಾಸಾರ್ಹ ಕಾರ್ಯಕ್ಷಮತೆಯನ್ನು ಪುನಃ ಸ್ಥಾಪಿಸಿವೆ. ಅಸ್ತ್ರ ಕ್ಷಿಪಣಿಯು ೧೦೦ ಕಿಲೋಮೀಟರ್‌ಗಳಿಗಿಂತ ಹೆಚ್ಚಿನ ವ್ಯಾಪ್ತಿಯನ್ನು ಮತ್ತು ಅತ್ಯಾಧುನಿಕ ವ್ಯವಸ್ಥೆಯನ್ನು ಹೊಂದಿದೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ.ಅಸ್ತ್ರ ಕ್ಷಿಪಣಿಯ ಯಶಸ್ವಿ ಹಾರಾಟ ಪರೀಕ್ಷೆಗಾಗಿ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ ಹಾಗೂ ಭಾರತೀಯ ವಾಯುಪಡೆಯನ್ನು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅಭಿನಂಧಿಸಿದ್ದಾರೆ.

**********

ಐಸಿಸ್ ಪುಣೆ ಸ್ಲೀಪರ್ ಮಾಡ್ಯೂಲ್ ಪ್ರಕರಣದಲ್ಲಿ ಬೇಕಾಗಿದ್ದ ಮತ್ತೊಬ್ಬ ಪ್ರಮುಖ ಆರೋಪಿಯನ್ನು ರಾಷ್ಟ್ರೀಯ ತನಿಖಾ ಸಂಸ್ಥೆ ಬಂಧಿಸಿದೆ. ರಿಜ್ವಾನ್ ಅಲಿ ಪ್ರಕರಣದಲ್ಲಿ ಬಂಧಿತನಾಗಿರುವ ೧೧ನೇ ಆರೋಪಿಯಾಗಿದ್ದಾನೆ. ಈತ ಮತ್ತು ಇತರೆ ೧೦ ಆರೋಪಿಗಳು ದೇಶವನ್ನು ಅಸ್ಥಿರಗೊಳಿಸಲು ಮತ್ತು ಕೋಮು ಸೌಹಾರ್ದತೆಯನ್ನು ಕದಡಲು ಸರಣಿ ಭಯೋತ್ಪಾದಕ ಕೃತ್ಯಗಳನ್ನು ಎಸಗಲು ಸಂಚು ರೂಪಿಸಿದ್ದರು ಎಂದು ಎನ್‌ಐಎ ತಿಳಿಸಿದೆ. ಐಸಿಸ್‌ನ ಭಯೋತ್ಪಾದಕ ಚಟುವಟಿಕೆಗಳನ್ನು ಉತ್ತೇಜಿಸುವಲ್ಲಿ ಸಕ್ರಿಯವಾಗಿ ಭಾಗಿಯಾಗಿದ್ದ ರಿಜ್ವಾನ್ ವಿರುದ್ಧ ಎನ್‌ಐಎ ವಿಶೇಷ ನ್ಯಾಯಾಲಯವು ಜಾಮೀನು ರಹಿತ ವಾರಂಟ್ ಅನ್ನು ಸಹ ಹೊರಡಿಸಿತ್ತು. ಪ್ರಕರಣದಲ್ಲಿ ರಿಜ್ವಾನ್ ಸಕ್ರಿಯ ಪಾತ್ರ ವಹಿಸಿದ್ದಾನೆ. ಅಲ್ಲದೇ ಆತ ಸ್ಫೋಟಕ ಸಾಧನಗಳ ತಯಾರಿಕೆಯ ತರಬೇತಿ ನೀಡುವುದರಲ್ಲಿಯೂ ತೊಡಗಿಕೊಂಡಿದ್ದ ಎಂದು ಎನ್‌ಐಎ ಹೇಳಿದೆ.

**********

ನೇಮಕಾತಿ ಪ್ರಕ್ರಿಯೆಯನ್ನು ಪಾರದರ್ಶಕ, ಪರಿಣಾಮಕಾರಿ ಮತ್ತು ತಂತ್ರಜ್ಞಾನ ಆಧಾರಿತವಾಗಿಸುವ ಗುರಿಯನ್ನು ಹೊಂದಿರುವ ಸುಧಾರಣೆಗಳ ಸರಣಿಯನ್ನು ರೈಲ್ವೆ ಸಚಿವಾಲಯ ಕೈಗೊಂಡಿದೆ. ನೇಮಕಾತಿ ಪ್ರಕ್ರಿಯೆಗಳಲ್ಲಿ ಅರ್ಜಿ ಪ್ರಕ್ರಿಯೆಯನ್ನು ಸರಳಗೊಳಿಸುವ ಒಂದು-ಬಾರಿ ನೋಂದಣಿ ವ್ಯವಸ್ಥೆ ಸೇರಿದಂತೆ ಹಲವಾರು ಅಭ್ಯರ್ಥಿ ಸ್ನೇಹಿ ಕ್ರಮಗಳನ್ನು ಜಾರಿಗೆ ತರಲಾಗಿದೆ. ಎಲ್ಲಾ ಗ್ರೂಪ್ "ಸಿ" ಹುದ್ದೆಗಳು ಮತ್ತು ಹಂತ-೧ ವಿಭಾಗಗಳಿಗೆ ೨೦೨೪ ರಿಂದ ಮೊದಲ ಬಾರಿಗೆ ವಾರ್ಷಿಕ ನೇಮಕಾತಿ ಕ್ಯಾಲೆಂಡರ್ ಅನ್ನು ಪರಿಚಯಿಸಲಾಗಿದೆ. ಆಧಾರ್ ಆಧಾರಿತ ಇ-ಕೆವೈಸಿ, ನೈಜ-ಸಮಯದ ಮುಖ ಗುರುತಿಸುವಿಕೆ ಮತ್ತು ಫೋಟೋ ಮೌಲ್ಯೀಕರಣವು ಈಗ ಪರೀಕ್ಷಾ ಪ್ರಕ್ರಿಯೆಯ ಅವಿಭಾಜ್ಯ ಅಂಗವಾಗಿದೆ. ದೊಡ್ಡ ಪ್ರಮಾಣದ ಪರೀಕ್ಷೆಗಳನ್ನು ಬೆಂಬಲಿಸಲು, ಪರೀಕ್ಷಾ ಮೂಲಸೌಕರ್ಯವನ್ನು ಗಣನೀಯವಾಗಿ ವಿಸ್ತರಿಸಲಾಗಿದೆ. ೩೨೫ಕ್ಕೂ ಹೆಚ್ಚು ಕೇಂದ್ರಗಳು ಪ್ರತಿದಿನ ಕಾರ್ಯನಿರ್ವಹಿಸುತ್ತವೆ. ಪ್ರತಿಯೊಂದು ಕೇಂದ್ರವು ಸುಮಾರು ೩೫೦ ಅಭ್ಯರ್ಥಿಗಳ ಸಾಮರ್ಥ್ಯವನ್ನು ಹೊಂದಿದೆ ಎಂದು ರೈಲ್ವೆ ಸಚಿವಾಲಯ ತಿಳಿಸಿದೆ.

**********

ಲಂಡನ್‌ನ ಸೆಂಟರ್ ಕೋರ್ಟ್‌ನಲ್ಲಿ ಇಂದು ರಾತ್ರಿ ನಡೆಯಲಿರುವ ವಿಂಬಲ್ಡನ್ ಗ್ರ್ಯಾನ್ ಸ್ಲ್ಯಾಮ್ ಟೆನಿಸ್ ಪಂದ್ಯಾವಳಿಯ ಮಹಿಳಾ ಸಿಂಗಲ್ಸ್ ವಿಭಾಗದ ಫೈನಲ್‌ನಲ್ಲಿ ಐದು ಬಾರಿ ಗ್ರ್ಯಾಂಡ್ ಸ್ಲಾಂ ಚಾಂಪಿಯನ್ ಪೋಲ್ಯಾಂಡ್‌ನ ಇಗಾ ಸ್ವಿಯಾಟೆಕ್ ಹಾಗೂ ೧೩ನೇ ಶ್ರೇಯಾಂಕಿತ ಅಮೆರಿಕದ ಅಮಾಂಡಾ ಅನಿಸಿಮೋವಾ ಪ್ರಶಸ್ತಿಗಾಗಿ ಸೆಣಸಾಟ ನಡೆಸಲಿದ್ದಾರೆ. ಈ ಪಂದ್ಯ ಭಾರತೀಯ ಕಾಲಮಾನ ರಾತ್ರಿ ೮:೩೦ಕ್ಕೆ ಆರಂಭವಾಗಲಿದೆ. ಸ್ವಿಯಾಟೆಕ್, ಸೆಮಿಫೈನಲ್‌ನಲ್ಲಿ ಸ್ವಿಟ್ಜರ್ಲ್ಯಾಂಡ್‌ನ ಬಿಲಿಂಡಾ ಬೆನ್ಸಿಚ್ ಅವರನ್ನು ೬-೨, ೬-೦ ಅಂತರದಲ್ಲಿ ನೇರ ಸೆಟ್‌ಗಳಿಂದ ಮಣಿಸಿ, ತಮ್ಮ ಮೊದಲ ವಿಂಬಲ್ಡನ್ ಫೈನಲ್‌ಗೆ ಪ್ರವೇಶಿಸಿದರು.ಇನ್ನೊಂದೆಡೆ, ಅಮೆರಿಕದ ಅನಿಸಿಮೋವಾ, ವಿಶ್ವ ಅಗ್ರ ಶ್ರೇಯಾಂಕಿತ ಬೆಲಾರಸ್‌ನ ಆರಿನಾ ಸಬಲೆಂಕಾ ಅವರನ್ನು ೬-೪, ೪-೬, ೬-೪ ಸೆಟ್‌ಗಳಲ್ಲಿ ಸೋಲಿಸಿ ತಮ್ಮ ಮೊದಲ ವಿಂಬಲ್ಡನ್ ಫೈನಲ್‌ಗೆ ತಲುಪಿದರು.ಪುರುಷರ ಸಿಂಗಲ್ಸ್ ವಿಭಾಗದ ಸೆಮಿಫೈನಲ್‌ನಲ್ಲಿ, ವಿಶ್ವ ಅಗ್ರ ಶ್ರೇಯಾಂಕಿತ ಜಾನಿಕ್ ಸಿನ್ನರ್, ಏಳು ಬಾರಿ ವಿಂಬಲ್ಡನ್ ಚಾಂಪಿಯನ್ ನೊವಾಕ್ ಜೋಕೊವಿಚ್ ವಿರುದ್ಧ ೬-೩, ೬-೩, ೬-೪ ಅಂತರದ ಜಯ ದಾಖಲಿಸಿದರು. ಅವರು ನಾಳೆ ಎರಡನೇ ಶ್ರೇಯಾಂಕಿತ ಸ್ಪೇನ್‌ನ ಕಾರ್ಲೋಸ್ ಆಲ್ಕಾರಾಸ್ ವಿರುದ್ಧ ಫೈನಲ್ ಪಂದ್ಯದಲ್ಲಿ ಪ್ರಶಸ್ತಿಗಾಗಿ ಸೆಣಸಾಟ ನಡೆಸಲಿದ್ದಾರೆ.

**********

ಜಾರ್ಖಂಡ್‌ನ ರಾಂಚಿಯಲ್ಲಿ ನಿನ್ನೆ ನಡೆದ ೧೫ನೇ ಹಾಕಿ ಇಂಡಿಯಾ ಸಬ್ ಜೂನಿಯರ್ ಮಹಿಳಾ ರಾಷ್ಟ್ರೀಯ ಚಾಂಪಿಯನ್‌ಶಿಪ್‌ನ ಕ್ವಾರ್ಟರ್-ಫೈನಲ್ ಪಂದ್ಯಗಳಲ್ಲಿ ಅಮೋಘ ಪ್ರದರ್ಶನ ನೀಡಿದ ನಂತರ ಹರಿಯಾಣ, ಒಡಿಶಾ, ಮಿಜೋರಾಂ ಮತ್ತು ಜಾರ್ಖಂಡ್ ತಂಡಗಳು ಸೆಮಿಫೈನಲ್‌ಗೆ ಲಗ್ಗೆ ಇಟ್ಟಿವೆ.ಕ್ವಾರ್ಟರ್-ಫೈನಲ್ ಪಂದ್ಯಗಳಲ್ಲಿ, ಹರಿಯಾಣ, ಉತ್ತರ ಪ್ರದೇಶವನ್ನು ೧-೦, ಒಡಿಶಾ, ಬಿಹಾರವನ್ನು ೫-೦, ಮಿಜೋರಾಂ, ಪಂಜಾಬ್ ಅನ್ನು ೪-೦ ಗೋಲುಗಳಿಂದ ಸೋಲಿಸಿತು ಮತ್ತು ಆತಿಥೇಯ ಜಾರ್ಖಂಡ್, ಮಧ್ಯಪ್ರದೇಶವನ್ನು ಶೂಟೌಟ್‌ನಲ್ಲಿ ೫-೪ ಅಂತರದಿಂದ ಸೋಲಿಸಿತು.ಸೆಮಿಫೈನಲ್‌ನಲ್ಲಿ ಇಂದು ಹರಿಯಾಣ, ಒಡಿಶಾವನ್ನು ಎದುರಿಸಲಿದೆ ಮತ್ತು ಜಾರ್ಖಂಡ್ ವಿರುದ್ಧ ಮಿಜೋರಾಂ ಸೆಣಸಲಿದೆ.

**********

ಲಂಡನ್‌ನ ಲಾರ್ಡ್ಸ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಆಂಡರ್ಸನ್-ತೆಂಡೂಲ್ಕರ್ ಟ್ರೋಫಿಯ ಮೂರನೇ ಟೆಸ್ಟ್ ಪಂದ್ಯದ ಮೂರನೇ ದಿನದಾಟದಲ್ಲಿಂದು ಭಾರತ ತನ್ನ ಮೊದಲ ಇನಿಂಗ್ಸ್ ಮುಂದುವರಿಸಲಿದೆ. ಇಂದಿನ ದಿನದಾಟ ಅಪರಾಹ್ನ ೩.೩೦ ಕ್ಕೆ ಆರಂಭವಾಗಲಿದೆ. ನಿನ್ನೆ ಜಸ್ಪ್ರೀತ್ ಬೂಮ್ರಾ ಅವರ ೫ ವಿಕೆಟ್ ಗೊಂಚಲಿನ ಸಹಾಯದೊಂದಿಗೆ ಇಂಗ್ಲೆಂಡ್ ತಂಡವನ್ನು ೩೮೭ ರನ್ ಗಳಿಗೆ ಸೀಮಿತಗೊಳಿಸಿದ ಬಳಿಕ, ತನ್ನ ಮೊದಲನೇ ಇನ್ನಿಂಗ್ಸ್‌ನಲ್ಲಿ ಭಾರತ, ದಿನದ ಅಂತ್ಯಕ್ಕೆ ೩ ವಿಕೆಟ್ ನಷ್ಟಕ್ಕೆ ೧೪೫ ರನ್ ಮಾಡಿದೆ. ಅರ್ಧ ಶತಕ ಗಳಿಸಿರುವ ಕೆ.ಎಲ್.ರಾಹುಲ್ ಹಾಗೂ ೧೯ ರನ್ ಗಳಿಸಿರುವ ರಿಷಬ್ ಪಂತ್ ಕಣದಲ್ಲಿದ್ದಾರೆ.

*****END*****